O.S.No. 207/2007 P W - 3

ದಿನಾಂಕ 18.08.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. A.R.K. ವಕೀಲರಿಂದ :

ನಾನು ಮತ್ತು ವಾದಿಗಳು ಸಂಬಂಧಿಕರು ಎಂದರೆ ಸರಿಯಲ್ಲ. ನಾವು ಮತ್ತು ವಾದಿಗಳು ಒಂದೇ ಬೀದಿ ಮತ್ತು ಒಂದೇ ಊರಿನಲ್ಲಿ ಇರುತ್ತೇವೆ. ದಾವೆಯು ಸರ್ವೆ ನಂ. 81/3 ರಲ್ಲಿ 3 ಎಕರೆ 7 ಗುಂಟೆ ಜಮೀನು ಕಾಡುಜಕ್ಕಸಂದ್ರ ಗ್ರಾಮಕ್ಕೆ ಸಂಬಂಧಪಟ್ಟಿರುತ್ತದೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರೇ ಸ್ವಾಧೀನದಲ್ಲಿರುತ್ತಾರೆ. ಸಾಕ್ಷಿ ಮುಂದುವರೆದು ಪ್ರತಿವಾದಿಗಳು ಗಲಾಟೆ ಮಾಡಿ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ. ಯಾವ ದಿನಾಂಕ, ಯಾವ ವರ್ಷ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾವಾ ಸಲ್ಲಿಸುವ ಸಂದರ್ಬದಲ್ಲಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಮಾವ ಖರೀದಿ ಮಾಡಿದ ದಿನದಿಂದ ಇಲ್ಲಿಯವರೆಗೂ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ಪ್ರತಿವಾದಿಗಳ ವಿರುದ್ಧ ದೂರನ್ನು ನೀಡಿರುತ್ತಾರೆ. ಪ್ರಕರಣ ದಾಖಲಾಗಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ನಮ್ಮ ಜಮೀನಿನ ಸರ್ವೆ ನಂ. 89/2 ಇರುತ್ತದೆ. ಪಹಣಿ ಪತ್ರಿಕೆಯು ನನ್ನ ಮತ್ತು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತಿನಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ ಪ್ರತಿವಾದಿಗಳ ಜಮೀನು ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಗಳ ತಾತ ಪ್ರತಿವಾದಿಯವರ ಮಾವನಿಗೆ ಎರಡು ಕ್ರಯಪತ್ರಗಳ ಮೂಲಕ ಸರ್ವೆ ನಂ. 81/3 ಅನ್ನು ಕ್ರಯ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 27 ಗುಂಟೆ ಮಾರಾಟ

ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ  ಸಹ ವಾದಿಗಳ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ